ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 1413/2020

ಪ್ರಾಸಾ : 14
ಚಾಸಾ : 18

| | | |
|---|---|---|
| ಹೆಸರು | : | ಮಾಲೀನಿ |
| ತಂದೆಯ ಹೆಸರು | : | ಟಿ ಮೋಹನ |
| ಪ್ರಾಯ | : | 51 ವರ್ಷ |
| ಉದ್ಯೋಗ | : | ಮುಖ್ಯಾಧಿಕಾರಿ ಕೊಟೇಕಾರ್ ಪಟ್ಟಣ ಪಂಚಾಯತ್ |
| ವಾಸಸ್ಥಳ | : | ಉಳ್ಳಾಲ |

ದಿನಾಂಕಃ 10.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು **24.07.2017** ರಿಂದ **22.02.2022** ರವರೆಗೆ ವಿಟ್ಲ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

2. ದಿಃ 11.08.2020 ರಂದು ವಿಟ್ಲ ಪೋಲಿಸ್ ಠಾಣೆಯಿಂದ ವಿಟ್ಲ ಕಸಬಾ ಗ್ರಾಮದ ಉಕ್ಕಡ ಒತ್ತೆಸಾಲು ಎಂಬಲ್ಲಿರುವ ಸರೋಜ ಕೋಂ ಪೂವಪ್ಪ ಪೂಜಾರಿ ಅವರ ದನದ ಕೊಟ್ಟಿಗೆಯ ದೃಡಪತ್ರ ನೀಡುವಂತೆ ಬರೆದ ಕೋರಿಕೆ ಪತ್ರಕ್ಕೆ , ನಾನು ತೆರಿಗೆ ವಾಸುಲಿದಾರರಿಂದ ವರದಿಯನ್ನು ಪಡೆದುಕೊಂಡು ಸರೋಜ ಎಂಬುವವರ ವಾಸ್ತವ್ಯದ ಮನೆ ನಂಬ್ರ 3-329/ಎ ರ ಬಲಬದಿಯಲ್ಲಿ ದನದ ಕೊಟ್ಟಿಗೆ ಇರುತ್ತದೆ ಎಂದು ಅದೇ ದಿನ ದೃಡಪತ್ರ ಕೊಟ್ಟಿರುತ್ತೇನೆ. ದೃಡಪತ್ರವನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು .

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎ ಆರ್ ವಕೀಲರಿಂದಃ

3. ಪೋಲಿಸರ ಕೋರಿಕೆಯ ಮೇರೆಗೆ ಸ್ಥಳಕ್ಕೆ ಭೇಟಿ ನೀಡದೆ ನಿಪಿ-16 ನ್ನು ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿ ನೀಡಿದ್ದೇನೆ ಎಂದರೆ ಸರಿಯಲ್ಲ . ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ